O.S 204/2020
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ **26.02.2026**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಸ್ ಎ ವಕೀಲರಿಂದಃ**

1. ನನ್ನ ಆಧಾರ್ ಕಾರ್ಡ್ ನಲ್ಲಿ ಡಿ ಎಸ್ ವೆಂಕಟೇಶ್ವರ ಎಂದು ಹೆಸರಿರುತ್ತದೆ. ನನ್ನ ತಂದೆ ಹೆಸರು ಸುಬ್ಬಣ್ಣ ಡಿ. ಎಸ್. ನನ್ನ ತಂದೆ 2020ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಮತ್ತು ನನ್ನ ತಂದೆಯ ಹುಟ್ಟೂರು ಸಕಲೇಶಪುರ ತಾಲೂಕಿನ ಬೆಳಗೋಡು. ನಾವು ದಾವಾ ಆಸ್ತಿಯ ಗದ್ದೆ ಹೊಸೂರಿನಲ್ಲಿ 1988ರಿಂದ ಇಲ್ಲಿಯವರೆಗೆ ವಾಸವಾಗಿದ್ದೇವೆ. ನನ್ನ ಮತ್ತು ನನ್ನ ತಂದೆಯ ವಾಸಸ್ಥಳ ಹೊಳೆನರಸೀಪುರದಲ್ಲಿ ತೋರಿಸಲು ಯಾವುದೇ ದಾಖಲೆ ಇಲ್ಲ. ನಾನು ಬೆಂಗಳೂರಿನ ಎಚ್ಎಲ್‌ನಲ್ಲಿ ಚೀಫ್ ಸೂಪರ್ವೈಸರ್ ಆಗಿ ಕೆಲಸ ಮಾಡುತ್ತಿರುತ್ತೇನೆ. ನನಗೆ ಸದರಿ ಕೆಲಸ 1997ರಲ್ಲಿ ಸಿಕ್ಕಿರುತ್ತದೆ. ಈಗಲೂ ಸಹ ಕರ್ತವ್ಯದಲ್ಲಿರುತ್ತೇನೆ ನಾನು ಸದ್ರಿ ಕರ್ತವ್ಯದಲ್ಲಿ ಬೇರೆ ಬೇರೆ ಪಾಳಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ನನ್ನ ಹೆಂಡತಿ ಮತ್ತು ಕುಟುಂಬದೊಂದಿಗೆ ವಾಸವಾಗಿದ್ದೇನೆ. ನನ್ನ ತಾಯಿಯ ಹೆಸರು ಶಾರದಮ್ಮ ಆರ್ ಎಸ್ , ನಾನು ಮತ್ತು ನನ್ನ ತಂದೆಗೆ 2 ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅವರುಗಳು ಡಿ. ಎಸ್. ಉಷಾ, ಡಿ. ಎಸ್. ಪದ್ಮಾ, ಮಂಜುನಾಥೇಶ್ವರ ವೆಂಕಟೇಶ್ವರ ಮತ್ತು ಡಿ ಎಸ್ ಆಶಾ ನಾವೆಲ್ಲರೂ ಬೇರೆ ಬೇರೆ ವಾಸವಾಗಿದ್ದೇವೆ.

2. ನಾನು ಈ ದಾವೆ ಯನ್ನು ಪ್ರತಿವಾದಿ ಮೀನಾಕ್ಷಮ್ಮ ಅವರ ಮೇಲೆ ಕೂಡಿರುತ್ತೇನೆ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ತಿಳಿದಿಲ್ಲ. ನಾನು ಈ ದಾವೆಯನ್ನು ನಿರ್ಬಂಧಕಾಜ್ಞೆ ಕೇಳಿ ಹೂಡಿರುತ್ತೇನೆ. ದಾವಾ ಆಸ್ತಿಯು ಗದ್ದೆ ಹೊಸರಿನಲ್ಲಿರುತ್ತದೆ. ಅದು ಸರ್ವೆ ನಂಬರ್ 63ರಲ್ಲಿದ್ದು ಒಟ್ಟು 4 ಎಕರೆ 10 ಗುಂಟೆ ಇರುತ್ತದೆ. ದಾವಾ ಆಸ್ತಿಯನ್ನು ನಾನು ನನ್ನ ಚಿಕ್ಕಪ್ಪನ ಮಗಳಾದ ಶ್ರೀಲಕ್ಷ್ಮಿ ರವರಿಂದ ಖರೀದಿಸಿರುತ್ತೇನೆ. ನನ್ನ ತಂದೆ ಹೆಸರು ಸೂರ್ಯನಾರಾಯಣ ಡಿ ಎಸ್ ಸದರಿ ಆಸ್ತಿ ಶ್ರೀಲಕ್ಷ್ಮಿ ರವರ ತಂದೆಗೆ ರವರಿಗೆ ಸರ್ಕಾರದಿಂದ ಮುಳುಗಡೆ ಕಾರಣ ಮಂಜೂರಾದ ಆಸ್ತಿಯಾಗಿರುತ್ತದೆ. ಸೂರ್ಯ ನಾರಾಯಣ ಅವರಿಗೆ 4 ಜನ ಮಕ್ಕಳು ನಾನು ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಸಂದರ್ಭದಲ್ಲಿ ಶ್ರೀಲಕ್ಷ್ಮೀರವರ ಸಹೋದರರು ಯಾರೂ ಜೀವಂತವಾಗಿ ಇರಲಿಲ್ಲ. ನಾನು ದಾವಾ ಆಸ್ತಿ ಬಗ್ಗೆ ಮಂಜೂರಾತಿ ಚೀಟಿ ಅಥವಾ ಸ್ಕೆಚ್ಚು ಮತ್ತು ಇನ್ನಿತರ ದಾಖಲೆಗಳನ್ನು ನೋಡಿದ್ದೇನೆ. ಮತ್ತು ಅವುಗಳನ್ನು ನಾನು ಕ್ರಯ ಮಾಡಿಕೊಳ್ಳುವಾಗ ಪಡೆದುಕೊಂಡಿರುತ್ತೇನೆ. ಸದರಿ ಆಸ್ತಿಯನ್ನು ನಾನು ಕ್ರಯ ಮಾಡಿಕೊಳ್ಳುವಾಗ ಇದ್ದ ಮೂಲ ಸರ್ವೆ ನಂಬರ್ ಅಂದಾಜು 15 P ಇರಬಹುದು ಆದರೆ ನಿಖರವಾಗಿ ನನಗೆ ಈಗ ನೆನಪಿಲ್ಲ. ಕ್ರಯಕ್ಕೂ ಮುನ್ನ ನಾನು ಸದರಿ ಆಸ್ತಿಯನ್ನು ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆಯ

ವರದಿಗಳು ನನ್ನ ಬಳಿ ಇವೇ ಇಲ್ಲವೇ ಎಂಬುದು ನನಗೆ ಈಗ ನೆನಪಿಲ್ಲ. ಸದರಿ ಅಳತೆಯನ್ನು ಎಷ್ಟು ವರ್ಷಗಳ ಹಿಂದೆ ಮತ್ತು ನಾನು ಸ್ಥಳಕ್ಕೆ ಹೋಗಿ ಮಾಡಿಸಿದ್ದೇನಾ ಎಂಬುದು ನನಗೆ ಈಗ ನೆನಪಿಲ್ಲ. ನಾನು ಆ ರೀತಿ ಅಳತೆ ಮಾಡಿಸುವಾಗ ದಾವಾ ಆಸ್ತಿಯ ಚೆಕ್ ಬಂದು ನನಗೆ ಗೊತ್ತಿತ್ತು. ಮತ್ತು ಚೆಕ್ ಬಂದಿಯ 4 ಕಡೆ ಇರುವ ಸ್ವಾಧೀನ ಅನುಭವದಲ್ಲಿರುವ ವ್ಯಕ್ತಿಗಳ ಹೆಸರು ಸಹ ನನಗೆ ತಿಳಿದಿತು. ಪ್ರತಿವಾಗಿ ಮೀನಾಕ್ಷಿ ರವರ ಜಮೀನು ನನ್ನ ಜಮೀನಿನ ಪೂರ್ವಕ್ಕೆ 1 ನಾಲೆ ಮತ್ತು ಅದರ ನಂತರ ಬರುವ ರಸ್ತೆಯನ್ನು ದಾಟಿ ಬರುತ್ತದೆ. ಅವರು ನನ್ನ ಜಮೀನಿನ ಪಕ್ಕದ ಜಮೀನಿನಲ್ಲಿರುವ ಸ್ವಾಧೀನಾನುಭವ ಅಲ್ಲ

3. ನನ್ನ ಜಮೀನಿನ ಪೂರ್ವದಲ್ಲಿ ನಾಲೆ ಇಲ್ಲ. ಸಾಕ್ಷಿಗೆ ದಾವಾ ಅನಸೂಚಿಯ ಚೆಕ್ ಬಂದಿಯನ್ನು ಕೇಳಲಾಗಿ ಪೂರ್ವಕ್ಕೆ ಸರ್ವೆ ನಂಬರ್ 15/P 5 ಮತ್ತು ಸರ್ವೆ ನಂಬರ್ 16 ಬರುತ್ತದೆ ಎನ್ನುತ್ತಾರೆ. ಸದರಿ ಜಮೀನುಗಳಲ್ಲಿ 15/P 5 ಯಾರಿಗೂ ಮಂಜೂರಾಗಿಲ್ಲ ಮತ್ತು ಸರ್ವೆ ನಂಬರ್ 16ರಲ್ಲಿ ಸಣ್ಣೇಗೌಡ ಬಿನ್ ಜವರೇಗೌಡ ರವರು ಇರುತ್ತಾರೆ ದಾವಾ ಅನುಸೂಚಿಯಲ್ಲಿ ಸದರಿಯವರ ಹೆಸರನ್ನು ಏನಕ್ಕೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರ್‌ಗಳನ್ನು ದಾವಾ ಅನುಸೂಚಿಯಲ್ಲಿ ಸದರಿಯವರ ಹೆಸರನ್ನು ಏನಕ್ಕೆ ನಮೂದ ನಮೂದಿಸಿದರೆ ಸಾಕಾಗುತ್ತದೆ ಎಂಬ ಭಾವನೆಯಿಂದ ಹೆಸರುಗಳನ್ನು ನಮೂದಿಸಿಲ್ಲ ಎನ್ನುತ್ತಾರೆ. ನಾನು ಸರ್ಕಾರಿ ಜಮೀನಾದ ಸರ್ವೆ ನಂಬರ್ 15/P 5 ನಲ್ಲಿ ಸ್ವಲ್ಪ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇನೆ. ಸದರಿ ಜಮೀನು ಸರ್ಕಾರದ ಜಮೀನು ಎಂದು ತೋರಿಸಲು ನನ್ನ ಬಳಿ ಈಗ ಯಾವುದೇ ಕಂದಾಯ ದಾಖಲಾತಿಗಳಿಲ್ಲ ಆದರೆ ನಾನು ಹಾಜರಿಸಬಲ್ಲೆ. ದವಾ ಆಸ್ತಿಯ ಪೂರ್ವದಲ್ಲಿ ಸದರಿ 2 ಜಮೀನಿನ ಸರ್ವೆ ನಂಬರ್‌ಗಳು ಬರುತ್ತವೆ. ದಾವಾ ಆಸ್ತಿಯ ದಕ್ಷಿಣಕ್ಕೆ ಸರ್ವೆ ನಂಬರ್ 62ರಲ್ಲಿ ನಮ್ಮ ಕುಟುಂಬದ ಜಮೀನಿದೆ. ಅದೂ ಸಹ ಒಟ್ಟು 4 ಎಕರೆ 10 ಗುಂಟೆಯಲ್ಲಿರುತ್ತದೆ. ದಾಬಾ ಸೊತ್ತು ಮತ್ತು ಸರ್ವೆ ನಂಬರ್ 62ರ ಸ್ವತ್ತುಗಳನ್ನು ಒಟ್ಟುಗೂಡಿಸಿ ಅಲ್ಲಿ 8 ಎಕರೆ, 22 ಗುಂಟೆ ಕರಾವು ಒಳಗೊಂಡಂತೆ ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಸರ್ವೆ ನಂಬರ್ 61 ಕೆ. ಇ. ಬಿ. ವೆಂಕಟೇಶ್ ಅವರ ಮಗ ಶ್ರೀನಿವಾಸ್ ಅವರ ಜಮೀನಿದೆ. ಉತ್ತರಕ್ಕೆ ಸರ್ವೆ ನಂಬರ್ 15/P 4 ಪೂಜಾರಿ ಸುಬ್ಬೇಗೌಡರವರ ಜಮೀನಿದೆ ನಾನು ಈಗ ಹೇಳಿರುವ ಚೆಕ್ ಬಂದಿಯೇ ನಿಪಿ 1ರಲ್ಲಿ ಸಹ ನಮ್ಮದಾಗಿದೆ. ನಾನು ಸದ್ರೀ ಕ್ರಯಕ್ಕೆ ಮಾಡಿಕೊಂಡ ವರ್ಷ 2020 ಇರಬಹುದು, ಆದರೆ ನಿಖರವಾದ ದಿನಾಂತ ನನಗೆ ನೆನಪಿಲ್ಲ. ನಾನು ಕ್ರಯಕ್ಕೆ ಪಡೆದ ನಂತರ ಅದನ್ನು ಸರ್ವೆ ಮಾಡಿಸಿಲ್ಲ. ನಾನು ಆಸ್ತಿ ಖರೀದಿಸಿದ್ದಾಗಲೂ ಕೂಡ ಮತ್ತು ಈಗಲೂ ಸಹ ಅದರ ಸರ್ವೆ ನಂಬರ್ 63 ಇರುತ್ತದೆ. ನಾನು ಕ್ರಯಕ್ಕೆ ಪಡೆದ ಆಸ್ತಿಯನ್ನು ಸರ್ವೇ ಮಾಡಿಸದ ಕಾರಣ ಕೇವಲ ನಿಪಿ 1ರಂತೆ ವಿಸ್ತೀರ್ಣ ಹೇಳಬಲ್ಲೆ ವಿನಃ ಅದರಲ್ಲಿ ಇರುವ ವಿಸ್ತೀರ್ಣ ಎಷ್ಟು ಎಂದು ನಿಖರವಾಗಿ ನನಗೆ ತಿಳಿದಿಲ್ಲ ಎಂದು ಸರಿಯಲ್ಲ

4. ದಾವಾ ಆಸ್ತಿಯಲ್ಲಿ ಯಾವುದೇ ವಾಸದ ಮನೆ ಇಲ್ಲ. ದಾವಾ ಆಸ್ತಿಯಲ್ಲಿ ನಾನು ಆಳುಗಳಿಂದ ಕೆಲಸ ಮಾಡಿಸುತ್ತಿದ್ದು, ನಾನೂ ಸಹ ಅದರಲ್ಲಿ ಬಂದು ಹೋಗಿ ಮಾಡುತ್ತಿರುತ್ತೇನೆ. ಆ ರೀತಿ ನಾನು ಕರೆದುಕೊಂಡು ಬಂದ ಕೆಲಸಗಾರರ ಹೆಸರೂ ನನಗೆ ಈಗ ನೆನಪಿಲ್ಲ, ಆದರೆ ನನ್ನ ಪರವಾಗಿ ಅವರನ್ನು ಸಾಕ್ಷಿ ಮಾಡಿಸಬಲ್ಲೆ. ಸದರಿ ಕೆಲಸಗಾರರು ಗದ್ದೆ ಹೋಸೂರು ಮತ್ತು ಮೂಡಲ ಹಿಪ್ಪೆ ಗ್ರಾಮದವರು. ನಾನು ದಾವಾ ಆಸ್ತಿಯಲ್ಲಿ ತೆಂಗು, ಶುಂಠಿ, ಜೋಳ ಮತ್ತು ಕಬ್ಬು ಬೆಳೆ ಮಾಡುತ್ತೇನೆ. ಸದರಿ ಬೆಳೆಗಳು, ನೀರಾವರಿ ಬೆಳೆಗಳೆಂದರೆ ಸರಿ. ಮತ್ತು ಅವುಗಳೆಲ್ಲ ವಾಣಿಜ್ಯ ಬೆಳೆಗಳೆಂದರೆ ಸರಿ

5. ನಾನು ಕ್ರಯಕ್ಕೆ ಪಡೆದ ನಂತರದಿಂದ ಇಲ್ಲಿಯವರೆಗೆ ಬೆಂಗಳೂರಿನಲ್ಲಿ ನನ್ನ ಕರ್ತವ್ಯ. ಮಾಡಿರುತ್ತೇನೆ ನನ್ನ ಈಗಿನ ವಾಸಸ್ಥಳ ಮತ್ತು ದಾವಾ ಆಸ್ತಿಗೆ ಅಂದಾಜು 160 ಕಿಲೋಮೀಟರ್ ಅಂತರವಿರುತ್ತದೆ ಸದರಿ ಅಂತರವನ್ನು ಹೋಗಿ ಬಂದು ಪ್ರಯಾಣ ಮಾಡಲು 6 ಗಂಟೆಗಳು ಬೇಕಾಗುತ್ತವೆ ಎಂದರೆ ಸರಿ.

6. ನಾನು ಈ ದಾವೆ ಹೂಡಿದ ಸಮಯದಲ್ಲಿ ನನ್ನ ತಂದೆ ಜೀವಂತವಾಗಿ ಇದ್ದರೆ ಎಂದು ನನಗೆ ಈಗ ನೆನಪಿಲ್ಲ.

7. ನಾನು ಸದರಿ ಬೆಳೆಗಳಲ್ಲಿ ಕಬ್ಬನ್ನು ಮಾರಾಟ ಮಾಡಿರುವ ರಸೀದಿ ಹೊಂದಿದ್ದೇನೆ ಆದರೆ ಶುಂಠಿಯನ್ನು ಮಾರಾಟ ಮಾಡಿರುವ ರಶೀದಿ ಬಳಿ ಇಲ್ಲ. ದಾವಾ ಆಸ್ತಿಯಲ್ಲಿ ಎಗರಿಗೆ ಎಷ್ಟು ಕಬ್ಬು ಬೆಳೆಯುತ್ತಾರೆ ಮತ್ತು ಬೆಳೆ ಯಾವಾಗ ಬರುತ್ತದೆ ಮತ್ತು ಅವುಗಳನ್ನು ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಯಲು ಎಕರೆಗೆ ಎಷ್ಟು ಬೀಜ ಬೇಕಾಗುತ್ತದೆ ಮತ್ತು ಎಷ್ಟು ಕೆಲಸಗಾರರು ಬೇಕಾಗುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

8. ನಾನು ಈ ಮೇಲೆ ಹೇಳಿದ 4 ಬೆಳೆಗಳನ್ನು ಜಮೀನಿನಲ್ಲಿ ಒಟ್ಟಿಗೆ ಒಂದೇ ಬಾರಿ ಬೆಳೆಯಲು ಆಗುವುದಿಲ್ಲ ಎಂದರೆ ಸರಿ. ನಾನು ಈ ರೀತಿ ಬೆಳೆಗಳನ್ನು ಬೆಳೆದಿದ್ದಾಗಲೇ ಅಥವಾ ಅವುಗಳನ್ನು ಮಾರಾಟ ಮಾಡಿದ್ದಾಗಲೇ ಅದರ ಬಗ್ಗೆ ನನ್ನ ಬಳಿ ದಾಖಲೆ ಇದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರಿಸಬಲ್ಲೆ ಆ ರೀತಿ ಯಾವುದೇ ರಸೀದಿಗಳಿಲ್ಲ. ನಾನು ಯಾವುದೇ ಬೆಳೆಗಳನ್ನು ಬೆಳೆದಿಲ್ಲ ಎಂದರೆ ಸರಿಯಲ್ಲ.

9. ನನ್ನ ಜಮೀನಿನ ಬಳಿ ಪ್ರತಿವಾದಿ ಮೀನಕ್ಷಮ ಮತ್ತು ಅವರ ಮಕ್ಕಳು ಹಾಗೂ ಅವರ ಸಂಬಂಧಿಕರನ್ನು ನೋಡಿದ್ದೇನೆ. ದಾವಾ ಪತ್ರಿಕೆಯಲ್ಲಿ ಹೂ ನಮೂದಿಸಿರುವ ಪ್ರತಿವಾದಿಗಳ ವಿಳಾಸವನ್ನು ನಾನು ಅಕ್ಕಪಕ್ಕದವರಿಂದ ಕೇಳಿ

ತಿಳಿದುಕೊಂಡಿರುತ್ತೇನೆ. ನನಗೆ 1ನೇ ಪ್ರತಿವಾದಿಯ ಗಂಡ ಮತ್ತು ಆತನ ಅಣ್ಣ ತಮ್ಮಂದಿರಾದ ರಾಮು ಜಟ್ಟಿ ಮತ್ತು ಅವರ ಅಣ್ಣ ತಮ್ಮಂದಿರ ಬಗ್ಗೆಚೌಡಾ ಜೆಟ್ಟಿ ಅವರ ಬಗ್ಗೆ ಅಷ್ಟಾಗಿ ತಿಳಿದಿಲ್ಲ. ನನಗೆ ತಿಳಿದಂತೆ ಗದ್ದೆ ಹೋಸೂರಿನಲ್ಲಿ ಅವರ ಆಸ್ತಿ ಸಹ ಇರುತ್ತದೆ. ಸದರಿಯವರ ಆಸ್ತಿ 15ನೇ ಸರ್ವೆ ನಂಬರ್‌ನಲ್ಲಿ 4 ಎಕರೆ ಇರಬಹುದು ಆದರೆ ನನ್ನ ಭಾವನೆಗೆ ಅದು ಕಡಿಮೆ ಆಗಿರುತ್ತದೆ. ನನಗೆ ನನಗೆ ರಾಮಜಟ್ಟಿ ಮತ್ತು ಚೌಡಾಜಟ್ಟಿ ರವರು ತಲಾ 2 ಎಕರೆ ವಿಭಾಗ ಮಾಡಿಕೊಂಡಿದ್ದು ತಿಳಿದಿಲ್ಲ. ಅವರ ಜಮೀನಿನ ಚೆಕ್ ಬಂದಿ ಮತ್ತು ಅಲ್ಲಿರುವ ಸ್ವಾಧೀನದಾರರು ಯಾರೆಂದು ನನಗೆ ತಿಳಿದಿರುತ್ತದೆ. ಅವರ ಜಮೀನಿನ ಪಶ್ಚಿಮಕ್ಕೆ ನನ್ನ ಜಮೀನಿದೆ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಾಯಾಕಾಶ ನೀಡಿ ಮುಂದೂಡಿಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**